ಕೊಡಗು ಜಿಲ್ಲೆ ಸೋಮವಾರ ಪೇಟೆ ತಾಲ್ಲೂಕು ಕುಶಾಲನಗರದಲ್ಲಿ ರೇಷ್ಮೆ ಮಾರುಕಟ್ಟೆ ಸ್ಥಗಿತ.

1921(2496)

ಅಪ್ಪಚ್ಚುರಂಜನ್ ಎಂ.ಪಿ.(ಸೋಮವಾರಪೇಟೆ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಕುಶಾಲನಗರದಲ್ಲಿ ಈ ಹಿಂದ ಇದ್ದ ರೇಷ್ಮೆ ಮಾರುಕಟ್ಟೆ ಸ್ಥಗಿತಗೊಳ್ಳಲು ಕಾರಣವೇನು? ಇದರ ಕಾರ್ಯಾರಂಭಕ್ಕೆ ಕ್ರಮ ಕೈಗೊಳ್ಳಲಾಗುವುದೇ? (ವಿವರ ನೀಡುವುದು)

ಶ್ರೀ ಎಂ.ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ಮಾರುಕಟ್ಟೆ ಸ್ಥಗಿತಗೊಂಡಿರುವುದಿಲ್ಲ. ಹಾಲಿ ಕಾರ್ಯನಿರ್ವಹಿಸುತ್ತಿದೆ. ಕಳೆದ 2 ವರ್ಷಗಳ ಹಾಗೂ ಪ್ರಸಕ್ತ ಸಾಲಿನ ಜೂನ್ ಅಂತ್ಯದವರೆಗಿನ ವಹಿವಾಟು ವಿವರ ಕೆಳಗಿನಂತಿದೆ.

1999-2000	-	28 ಮೆ.ಟನ್ ಗೂಡುಗಳು
2000-2001	-	24 ಮೆ.ಟನ್ ಗೂಡುಗಳು
2001-2002 ಜೂನ್ ಅಂತ್ಯಕ್ಕೆ	-	5 ಮೆ.ಟನ್ ಗೂಡುಗಳು

ಮಂಡ್ಯ ನಗರದಲ್ಲಿ ನೈಬರ್‌ಹುಡ್ ಪಾಲಿಸಿ ಮೇಲೆ ವಾಣಿಜ್ಯ ಮಳಿಗೆಗಳ ನಿರ್ಮಾಣ.

1922(2636)

ಶ್ರೀ ಎಂ.ಎಸ್.ಆತ್ಮಾನಂದ(ಮಂಡ್ಯ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ವಸತಿ ಪ್ರದೇಶದಲ್ಲಿ (Residential Area) ನೈಬರ್ ಹುಡ್ ಪಾಲಿಸಿ(Neighbourhood policy) ಆಧಾರದ ಮೇಲೆ ವಾಣಿಜ್ಯ ಮಳಿಗೆಗಳನ್ನು ನಿರ್ಮಾಣ ಮಾಡಲು ಅನುಮತಿ ನೀಡಲಾಗುತ್ತಿದೆ?